ಶ್ರೀ ಡಿ.ವಿ. ಸದಾನಂದಗೌಡ : ಪರವಾಗಿಲ್ಲ, ಇದಕ್ಕಿಂತ ಬೆಟರ್ ಇದೆ. ಈ ಸರ್ಕಾರಕ್ಕಿಂತ ಸಾವಿರ ಪಾಲು ಗುಜರಾತ್ ಸರ್ಕಾರ ಬೆಟರ್ ಇದೆ. ಆ ಸಂಗತಿ ಈಗ ಬೇಡ.

ಗೊಂದಲ

ಅಧ್ಯಕ್ಷರು : ಚಂದ್ರೇಗೌಡರೇ, ಸರ್ಕಾರದ ಜವಾಬ್ದಾರಿ ಏನು ಎಂಬುದನ್ನು ಆದಷ್ಟು ಬೇಗ ತಿಳಿಸಿ. ಆಮೇಲೆ ಯಾವ ರೀತಿ ಇದನ್ನು ಅಲೋ ಮಾಡಬೇಕೆಂದು ನೋಡಿ ಮಾಡುತ್ತೇನೆ. ಈಗ ಸದನವನ್ನು ಮೂರು ಗಂಟೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 39 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮೂರು ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು ಮತ್ತೆ 3-15 ಕ್ಕೆ ಸಮಾವೇಶಗೊಂಡಿತು

(ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಅಧ್ಯಕ್ಷರ ಅನುಮತಿ ಕೋರಿ ಚರ್ಚೆ

ವಿಷಯ : ಝಳಕಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ (ಮುಂದು)

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ರೂಲಿಂಗ್ ಕೊಡಬೇಕಲ್ಲಾ ಸ್ವಾಮಿ. ಅದು ಬಹಳ ಮಹತ್ವದ ವಿಚಾರ. ನೀವು ಯಾವ ನಿಯಮದಲ್ಲಾದರೂ ಅವಕಾಶ ಕೊಡಿ. ಒಟ್ಟಿನಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಯಾವುದಾದರೊಂದು ರೂಪದಲ್ಲಿ ಅನುಮತಿ ಕೊಡಿ. ನನಗೂ ನಾಚಿಕೆಯಾಗುತ್ತದೆ. ನಾನು ಸರ್ಕಾರದಲ್ಲಿ ಇಡಿದ್ದರೇ ತಲೆ ತಗ್ಗಿಸಿಕೊಳ್ಳಬೇಕಾಗುತ್ತದೆ, ನಿಜ ಹೇಳಬೇಕೆಂದರೆ, ಮಾನ್ಯ ಕಾಗೋಡು ತಿಮ್ಮಪ್ಪನಂಥವರು ಎಷ್ಟೊಂದು ಅನುಭವಸ್ಥರವು, ಈ ಕಡೆ ಇದ್ದವರು. ಎಷ್ಟು ಹೋರಾಟ ಮಾಡಿದ್ದಾರೆ. ಇವತ್ತು ಝಳಕಿಯಲ್ಲಿ ಒಂದು ಫೈರಿಂಗ್ ಆಗಿದೆ. ನಾಲ್ಕೈದು ಜನ ಸತ್ತು ಹೋಗಿದ್ದಾರೆ. 40-50 ಜನಗಳಿಗೆ ಗಾಯಗಳಾಗಿವೆ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರಂತೆ. ಇಷ್ಟೆ ಆಗಿರುವುದು. ಇದರ ಬಗ್ಗೆ ಎಲ್ಲೆಲ್ಲಿ ಫೋಲ್ಯೂರ್ ಆಗಿದೆ, ಫೈರಿಂಗ್ ಏಕೆ ಆಯಿತು ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕೆಂದರೆ, ಅದಕ್ಕೊಂದು ತೊಗಲು ತೆಗೆದು, ಪಾರ್ಲಿಮೆಂಟರಿ ಮಿನಿಸ್ಟರು ಅದಕ್ಕೊಂದು ಕಡ್ಡಿ ಹಾಕಿ, ಇದು ಪ್ರೊಸೀಜರ್ ಅಲ್ಲ, ನೀವು ಚರ್ಚೆಯನ್ನೇ ಮಾಡಬೇಡಿ ಎಂದು ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದಾರೆ. ಇವತ್ತು ಜನ ನಮಗೆ ಏನು ಹೇಳುತ್ತಾರೆ?

ಅಧ್ಯಕ್ಷರ : ಅವರು ಹೇಳಿದ್ದು, ಶೂನ್ಯವೇಳೆಯಲ್ಲಿ ಇಂತಹ ವಿಷಯವನ್ನು ತೆಗೆದುಕೊಳ್ಳಬಹುದೇ ಎಂಬ ಬಗ್ಗೆ ಕೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜಜ್‌ಮೆಂಟ್ ಕೊಡುವುದಕ್ಕೆ ತಮಗೆ ಅನುಕೂಲವಾಗಬೇಕಲ್ಲಾ ಅದಕ್ಕೋಸ್ಕರ ಹೇಳುತ್ತಿದ್ದೇನೆ. ಒಂದು ಸಾರಿ ಈ ಹೌಸ್‌ನಲ್ಲಿ ವಿರೇಂದ್ರಪಾಟೀಲರು ಟೆಲಿಫೋನ್ ಕದ್ದಾಲಿಕೆ ಪ್ರಕರಣದಲ್ಲಿ, ಇನ್ನೊಂದು ಸಾರಿ ಬಜೆಟ್ ಕಾಫಿ ಲೀಕ್ ಆಗಿಬಿಟ್ಟಿತ್ತು. ಮಾನ್ಯ ಕೆ.ಹೆಚ್. ರಂಗನಾಥ್‌ರವರು ಸ್ವಲ್ಪ ಸ್ವಲ್ಪ ಭಿನ್ನಮತ ಆಗ. ಅವರಿಗೊಂದು ಕಾಪಿ ಸಿಕ್ಕಿತ್ತು. ಆಗ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು.

ಆಗ ಎಷ್ಟೊಂದು ಆಟವಾಡಿಸಿಬಿಟ್ಟರು ಎಂಬುದು ನಿಮಗೇ ಗೊತ್ತಿದೆ. ನಾವು ಆ ತರಹ ಹೌಸನ್ನು ಹೋಲ್ಡ್ ಮಾಡುವುದಕ್ಕೆ ಹೋಗದೇ ಹೋದರೂ, ನಮ್ಮ ಬಗ್ಗೆ ಏನು ಅಭಿಪ್ರಾಯ ಬರುತ್ತದೆ ಅಧ್ಯಕ್ಷರೇ. ಆದ್ದರಿಂದ, ನಾವು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಅಧ್ಯಕ್ಷರಿಗೆ ಅಪೀಲು ಮಾಡುವುದನ್ನು ಬಿಟ್ಟು ನಮಗೆ ಏಕೆ ತಂದು ಚುಚ್ಚಿಸುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಚುಚ್ಚುವುದೇ ನಮ್ಮ ಕೆಲಸ. ಇಲ್ಲದೇ ಹೋದರೆ ಎಲ್ಲಿ ಆಗುತ್ತದೆ. ಆದ್ದರಿಂದ ಇವತ್ತು ಜಳಕಿ ಫೈರಿಂಗ್ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ. ಇದರ ಬಗ್ಗೆ ನಾವೇನು ಹೇಳಬೇಕೆಂದಿದ್ದೇವೋ ಅದನ್ನೆಲ್ಲಾ ಹೇಳುತ್ತೇವೆ. ಸರ್ಕಾರ ಉತ್ತರ ಕೊಡುತ್ತದೆ. ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾವು ಹೇಳುವುದರಿಂದ ಸರ್ಕಾರದವರಿಗೇ ಉಪಯೋಗವಾಗುತ್ತದೆ. ಮುಂದೆ ಇದು ರಿಪೀಟ್ ಆಗದ ಹಾಗೆ ನೋಡಿಕೊಳ್ಳಬಹುದು.

ಅಧ್ಯಕ್ಷರು : ಆಯಿತು, ನನಗೆ ಸಮಯ ಕೊಡಿ. ನಾಳೆ ಕೊಡುತ್ತೇನೆ. ಈಗ ಬರದ ಬಗ್ಗೆ ಇವತ್ತು ಮುಕ್ತಾಯ ಮಾಡೋಣ. ನಾಳೆ ಡಿಮ್ಯಾಂಡ್ ಬಗ್ಗೆ ತೆಗೆದುಕೊಳ್ಳೋಣ. ಇಲ್ಲಿ ಬೇರೆ ಸದಸ್ಯರಿಗೆ ಅವಕಾಶವಿಲ್ಲವೆಂದಲ್ಲ. ಬೇಕಾದಷ್ಟು ವಿಷಯಗಳು ಇವೆಯಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಿನ್ನೆಯದಿನ ಮಾನ್ಯಮುಖ್ಯಮಂತ್ರಿಗಳು ಪತ್ರಿಕಾಕರ್ತರ ಜೊತೆಯಲ್ಲಿ ಮಾತನಾಡತಕ್ಕ ಸಮಯದಲ್ಲಿ, ವಿರೋಧಪಕ್ಷದವರು ಸುಸ್ತ್ ಆಗುವವರೆಗೂ ನಾನು ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ ಮತ್ತು ಕೇಳುವುದಕ್ಕೆ ತಯಾರಿದ್ದೇನೆಂದು ಹೇಳಿದ್ದಾರೆ. ಅವರೇ ಆ ರೀತಿ ಹೇಳುವುವಾಗ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ಏನು ಅಡ್ಡಿ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ ಇದರ ಬಗ್ಗೆ ಚರ್ಚೆಯಾಗಿದ್ದರೆ ಏನು ಆಗುತ್ತಿತ್ತು?

ಅಧ್ಯಕ್ಷರು: ಇವತ್ತು ಮುಗಿಸಿ, ನಾಳೆಯಿಂದ ಡಿಮ್ಯಾಂಡ್ ತೆಗೆದುಕೊಳ್ಳೋಣ. ಬೇರೆ ಸದಸ್ಯರೂ ಕೂಡ ಬೇರೆ ಬೇರೆ ಡಿಮ್ಯಾಂಡ್‌ಗಳ ಮೇಲೆ ಮಾತನಾಡಲಿ. ಇವತ್ತು ಎಲ್ಲಾ ತಾಲ್ಲೂಕುಗಳಲ್ಲೂ ಬರ ಇಲ್ಲವಲ್ಲ. ಪ್ರತಿಯೊಬ್ಬರೂ ಬರದ ಮೇಲೆಯೇ ಮಾತನಾಡು -ವುದಕ್ಕಾಗುತ್ತದೆಯೇ? ನಿಮ್ಮ ನಾಯಕರು ಮತ್ತು ಇನ್ನೂ ಕೆಲವರು ಮಾತನಾಡುತ್ತಾರೆ. ನೀವೂ ಕೂಡ ಆ ರೀತಿ ಮಾತನಾಡಿ. ಈ ವಿಷಯವನ್ನು ಇವತ್ತು ಮುಗಿಸಿ ಸರ್ಕಾರದಿಂದಲೂ ಉತ್ತರವನ್ನು ತೆಗೆದುಕೊಂಡು ನಾಳೆಯಿಂದ ಇಲಾಖೆಗಳ ಬಗ್ಗೆ ಚರ್ಚೆಗೆ ಹೋಗೋಣ.

5. ನಿಯಮ 69ರ ಮೇರೆಗೆ ರಾಜ್ಯದಲ್ಲಿ ಮುಂಗಾರು ಮಳೆಯ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿಯ ಬಗ್ಗೆ :-

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಂದಂಥ ಬರದ ಜಳ ಎಲ್ಲರಿಗೂ ಬಡಿಯುತ್ತಾ ಇದೆ. ಮೊದಲನೇ ದಿವಸವೇ ಮಾನ್ಯ ವಿರೋಧಪಕ್ಷದವರು ಈ ಬಗ್ಗೆ ಬಹಳ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ದುರ್ದೈವದಿಂದ ಬರದ ಕರಿನೆರಳು ನಮ್ಮಲ್ಲೂ ಚಾಚುತ್ತಾ ಇದೆ, ಎನ್ನುವಂಥ ಭಯ ನಮ್ಮೆಲ್ಲರನ್ನೂ ಕಾಡುತ್ತಾ ಇದೆ. ಅದು ಮಲೆನಾಡು ಇರಬಹುದು, ಉತ್ತರ ಕರ್ನಾಟಕ ಇರಬಹುದು, ದಕ್ಷಿಣ ಕರ್ನಾಟಕ ಇರಬಹುದು, ಬಹುತೇಕ